# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೮೫<br>No. 85 |


**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

---

ಸಂಖ್ಯೆ: ಕಪಂರಾಸೀನಿಆ/61/ಪ್ರಾ.ಗ.ನಿ/2023 ದಿನಾಂಕ:17-01-2026

## ಪ್ರಕಟಣೆ

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ಕಂದಾಯ ಇಲಾಖೆಯು, ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ 68 ಗ್ರಾಮಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರ್ಪಡೆಗೊಳಿಸಿ ಅಧಿಸೂಚನೆ ಸಂಖ್ಯೆ:ಕಂಇ 72 ಎಲ್ಆರ್‌ಡಿ 2024, ದಿನಾಂಕ:27-10-2025 ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನಸಂಖ್ಯೆಯು ಬದಲಾವಣೆಯಾಗುವುದರಿಂದ, ನೆಲಮಂಗಲ ಹಾಗೂ ದೇವನಹಳ್ಳಿ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಸದಸ್ಯರ ಸಂಖ್ಯೆಯಲ್ಲಿ ಬದಲಾವಣೆಗೊಳ್ಳುತ್ತದೆ. ಆದ್ದರಿಂದ ಸರ್ಕಾರವು, ದಿನಾಂಕ:06-01-2026 ಹಾಗೂ 16-01-2026 ರ ಕರ್ನಾಟಕ ರಾಜ್ಯ ಪತ್ರದಲ್ಲಿ ನೆಲಮಂಗಲ ಹಾಗೂ ದೇವನಹಳ್ಳಿ ತಾಲ್ಲೂಕುಗಳ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ನೆಲಮಂಗಲ ಹಾಗೂ ದೇವನಹಳ್ಳಿ ತಾಲ್ಲೂಕುಗಳ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಎಫ್) ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಟಕದ 2ನೇ ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು 3ನೇ ಅಂಕಣದಲ್ಲಿ ನಿಗದಿಪಡಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು 15 ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ

ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **'ಆ'** ಕೋಷ್ಟಕದ 2 ನೇ ಅಂಕಣದಲ್ಲಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ 3 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 7 (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ 'ಅ'**

| ಬೆಂಗಳೂರು ಗ್ರಾಮಾಂತರ ಜಿಲ್ಲೆ | | |
|---|---|---|
| **ಕ್ರ. ಸಂ.** | **ತಾಲ್ಲೂಕು ಪಂಚಾಯತಿಯ ಹೆಸರು** | **ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ** |
| 1 | 2 | 3 |
| | **ದೇವನಹಳ್ಳಿ** | **15** |

**ಕೋಷ್ಟಕ 'ಆ'**

| ಬೆಂಗಳೂರು ಗ್ರಾಮಾಂತರ ಜಿಲ್ಲೆ | | |
|---|---|---|
| **ಕ್ರ ಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| 1 | 2 | 3 |
| **ದೇವನಹಳ್ಳಿ ತಾಲ್ಲೂಕು ಪಂಚಾಯಿತಿ** | | |
| **1** | 1. ಕಾರಹಳ್ಳಿ | ಕಾರಹಳ್ಳಿ, ಕಾರಹಳ್ಳಿಅಮಾನಿಕೆರೆ (ಬೇ), ಕೊಟ್ಟಿಗೆತಿಮ್ಮನಹಳ್ಳಿ, ತೈಲಗೆರೆ, ಮೀಸಗಾನಹಳ್ಳಿ, ಕೆಂಪತಿಮ್ಮನಹಳ್ಳಿ, ಮೂಡಿಗಾನಹಳ್ಳಿ, ಯರಪ್ಪನಹಳ್ಳಿ (ಬೇ), ಯಂಬ್ರಹಳ್ಳಿ, ದಾಸರಹಳ್ಳಿ, ಮುದ್ದನಾಯಕನಹಳ್ಳಿ, ಸೊಣ್ಣೇನಹಳ್ಳಿ, ಕೊಯಿರಾ, ಕೊಯಿರಾಹೊಸೂರು (ದಾ), ಮಾಯಸಂದ್ರ, ರಾಮನಾಥಪುರ, ರಬ್ಬನಹಳ್ಳಿ, ಅರುವನಹಳ್ಳಿ. |
| **2** | 2. ವೆಂಕಟಗಿರಿಕೋಟೆ | ವೆಂಕಟಗಿರಿಕೋಟೆ, ತಟಮಾಚನಹಳ್ಳಿಅಮಾನಿಕೆರೆ (ಬೇ), ಹುರುಳುಗುರ್ಕಿ, ಬಿಂಗೀಪುರ(ಬೇ), ಹೊಸಹುಡ್ಯ, ದೊಡ್ಡಸಾಗರಹಳ್ಳಿ, ಸಿಂಗವಾರ (ದಾ), ಮುದುಗುರ್ಕಿ, ಬಿಜ್ಜವಾರ, ಗುರುರಾಯನಹೊಸೂರು, ಇರಿಗೇನಹಳ್ಳಿ, ಗೊಲ್ಲಹಳ್ಳಿ, ಸಾಂಬಾರಗಿಡದಕಾವಲು(ಬೇ), ಜಿ.ಹೊಸಹಳ್ಳಿ, ಚಿಕ್ಕಮರಳಿ (ದಾ), ಗೋಣೂರು. |

| ಬೆಂಗಳೂರು ಗ್ರಾಮಾಂತರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| 3 | 3. ಗೊಡ್ಲುಮುದ್ದೇನಹಳ್ಳಿ | ಗೊಡ್ಲುಮುದ್ದೇನಹಳ್ಳಿ, ರೋಡಹಳ್ಳಿ(ದಾ), ನಾರಾಯಣಪುರ, ಚಿನುವಂಡನಹಳ್ಳಿ, ಎ.ರಂಗನಾಥಪುರ, ಪಿ.ರಂಗನಾಥಪುರ(ದಾ), ಸಿ.ಎನ್.ಹೊಸೂರು, ಕೊಮ್ಮಸಂದ್ರ, ಭಟ್ರೇನಹಳ್ಳಿ, ಹರಳೂರುನಾಗೇನಹಳ್ಳಿ, ಚಂದೇನಹಳ್ಳಿ, ವೆಂಕಟೇನಹಳ್ಳಿ, ಶೆಟ್ಟಿಹಳ್ಳಿ, ಯಲುವಹಳ್ಳಿ, ವಿಜಯಪುರಅಮಾನಿಕೆರೆ, ಪುರ. |
| 4 | 4. ಹಾರೋಹಳ್ಳಿ | ಹಾರೋಹಳ್ಳಿ, ಚಿಕ್ಕನಹಳ್ಳಿ, ದೊಡ್ಡಮುದ್ದೇನಹಳ್ಳಿ, ತಿಮ್ಮಹಳ್ಳಿ, ಬುಳ್ಳಹಳ್ಳಿ, ಕೋರಮಂಗಲ, ಗುಡುವನಹಳ್ಳಿ (ದಾ), ಕೊಂಡೇನಹಳ್ಳಿ (ಬೇ), ಬಯಲುಬಂದಿಖಾನೆ (ಜೈಲು), ದಂಡಿಗಾನಹಳ್ಳಿ, ಬೈರಾಪುರ. |
| 5 | 5. ಆವತಿ | ಆವತಿ, ಅತ್ತಿಬೆಲೆ, ಬೈರಪ್ಪನಹಳ್ಳಿ, ಗೊಬ್ಬರಗುಂಟೆ, ಅಬ್ಬಚಿಕ್ಕನಹಳ್ಳಿ, ಲಾಲಗೊಂಡನಹಳ್ಳಿ, ಕುರುಬರಕುಂಟೆ, ಜನತಾಕಾಲೋನಿ, ಗುಟ್ಟಹಳ್ಳಿ(ಬೇ), ಬಿದಲೂರು, ವಡೇರಹಳ್ಳಿ, ಅಣಿಘಟ್ಟ, ದೇವಸ್ಥಾನಅಮಾನಿಕೆರೆ, ಮಾಳಿಗೇನಹಳ್ಳಿ, ದೇವೇನಹಳ್ಳಿಮುಳ್ಳಿಅಮಾನಿಕೆರೆ(ಬೇ), ಕಸಬಾಪ್ಲಾಂಟೇಷನ್ (ಬೇ), ಕೋಡಗುರ್ಕಿ, ಸಾವಕನಹಳ್ಳಿ. |
| 6 | 6. ವಿಶ್ವನಾಥಪುರ | ವಿಶ್ವನಾಥಪುರ, ಸೀಕಾಯನಹಳ್ಳಿ(ದಾ), ಚಿಕ್ಕಓಬದೇನಹಳ್ಳಿ, ಚಪ್ಪರದಹಳ್ಳಿ, ಬೈರದೇನಹಳ್ಳಿ, ಬ್ಯಾಡರಹಳ್ಳಿ, ಶೆಟ್ಟೇರಹಳ್ಳಿ, ಲಕ್ಷ್ಮೀಪುರ, ದೊರೆಕಾವಲು, ಸೋಲೂರು, ಸೋಲೂರುದಿಣ್ಣೆ(ದಾ), ಬೊಮ್ಮವಾರ, ಚಿಕ್ಕಚೀಮನಹಳ್ಳಿ, ಚಿಕ್ಕಗೊಲ್ಲಹಳ್ಳಿ, ವಾಜರಹಳ್ಳಿ(ಬೇ), ಗುಂಡ್ಲಹಳ್ಳಿ(ಬೇ), ಶ್ಯಾನಪ್ಪನಹಳ್ಳಿ, ದೊಡ್ಡಗೊಲ್ಲಹಳ್ಳಿ, ಮನಗೊಂಡನಹಳ್ಳಿ, ಜ್ಯೋತಿಪುರ. |
| 7 | 7. ಯಲಿಯೂರು | ಯಲಿಯೂರು, ಕೊಮ್ಮಸಂದ್ರ, ಗೋಕರೆ, ಬಿನ್ನಮಂಗಲ, ಮಂಡಿಬೆಲೆ, ಚಿಕ್ಕತತ್ತಮಂಗಲ, ಗಡ್ಡದನಾಗೇನಹಳ್ಳಿ, ತಿಮ್ಮನಹಳ್ಳಿ, ಧರ್ಮಪುರ, ಗೆಜ್ಜಿಗುಪ್ಪೆ, ದೊಡ್ಡತತ್ತಮಂಗಲ, ಹಳಿಯೂರು(ದಾ). |
| 8 | 8. ಚನ್ನರಾಯಪಟ್ಟಣ | ಚನ್ನರಾಯಪಟ್ಟಣ, ಚನ್ನರಾಯಪಟ್ಟಣಅಮಾನಿಕೆರೆ, ದಿನ್ನೂರು (ದಾ), ಹ್ಯಾಡಾಳು, ನಾಗನಾಯಕನಹಳ್ಳಿ, ಮುದ್ದೇನಹಳ್ಳಿ, ಪಾಳ್ಯ, ಬೀಡಿಗಾನಹಳ್ಳಿ, ಇರಿಗೇನಹಳ್ಳಿ, ಚೀಮಾಚನಹಳ್ಳಿ, ಐಬಸಾಪುರ, ಅಂಬಲೀಪುರ (ದಾ), ಮರಡಿಅಣೆ (ದಾ), ಗುಮ್ಮನಹಳ್ಳಿ(ಬೇ), ಗೋಪಸಂದ್ರ, ದೊಡ್ಡಕುರುಬರಹಳ್ಳಿ, ಕೊಣಗಿನಬೆಲೆ, ವರದೇನಹಳ್ಳಿ, ಪಾಪನಹಳ್ಳಿ. |
| 9 | 9. ಕುಂದಾಣ | ಕುಂದಾಣ (ಕೊಪ್ಪಲು), ಚಿನ್ನಕೆಂಪನಹಳ್ಳಿ, ನರಗನಹಳ್ಳಿ, ದೊಡ್ಡಚೀಮನಹಳ್ಳಿ, ಪೆದ್ದನಹಳ್ಳಿ, ಅರಸನಹಳ್ಳಿ, ಲಿಂಗಧೀರಗೊಲ್ಲಹಳ್ಳಿ, ದ್ಯಾವರಹಳ್ಳಿ, ವೆಂಕಟಾಪುರ, ದೇವಗಾನಹಳ್ಳಿ, ಸೂಲಕುಂಟೆ, ಬಚ್ಚಹಳ್ಳಿ, ಆಲೂರು, ದುದ್ದನಹಳ್ಳಿ, ಸುಣ್ಣಘಟ್ಟ, ಬಿನ್ನಮಂಗಲ, ದಿನ್ನೂರು(ದಾ), ಬಿನ್ನಮಂಗಲಅಮಾನಿಕೆರೆ (ಬೇ), ಪಂಡಿತಪುರ, ಬೀರಸಂದ್ರ. |
| 10 | 10.ಅರದೇಶಹಳ್ಳಿ | ಅರದೇಶಹಳ್ಳಿ, ಜಾಲಿಗೆ, ಕಾಮೇನಹಳ್ಳಿ, ಬಸವನಪುರ(ದಾ), ಮಾರಗೊಂಡನಹಳ್ಳಿ, ಚಿಕ್ಕಣ್ಣನಹೊಸಹಳ್ಳಿ, ಅರದೇಶಹಳ್ಳಿ, ಹೆಗ್ಗನಹಳ್ಳಿ, ಬೋವಿಪಾಳ್ಯ(ದಾ), ಇಂಡ್ರಸನಹಳ್ಳಿ, ಇಂಡ್ರಸನಹಳ್ಳಿಹೊಸೂರು (ದಾ), ನಾಗಮಂಗಲ, ಬೆಟ್ಟೇನಹಳ್ಳಿ, ಸಿಂಗ್ರಹಳ್ಳಿ, ದಿಣ್ಣೂರು(ದಾ), ತಿಂಡ್ಲು, ಜುಟ್ಟನಹಳ್ಳಿ. |
| 11 | 11. ಕನ್ನಮಂಗಲ | ಕನ್ನಮಂಗಲ, ಕುಂಬಾರಪಾಳ್ಯ(ದಾ), ಪೂಜನಹಳ್ಳಿ, ಸಾದಹಳ್ಳಿ, ಜೋಗಿಹಳ್ಳಿ, ಕೆಂಪತಿಮ್ಮನಹಳ್ಳಿ, ಕನ್ನಮಂಗಲಪಾಳ್ಯ, ದೊಡ್ಡಪ್ಪನಹಳ್ಳಿ, ಉಗನವಾಡಿ, ಕೆಂಪಲಿಂಗನಪುರ, ತಿಮ್ಮೇಗೌಡನಹೊಸಹಳ್ಳಿ, ಮುಳ್ಳಅಮಾನಿಕೆರೆ(ಬೇ), ಇಲ್ತೊರೆ, ಚೌಡನಹಳ್ಳಿ. |
| 12 | 12. ಅಣ್ಣೇಶ್ವರ | ಅಣ್ಣೇಶ್ವರ, ಯರಪ್ಪನಹಳ್ಳಿ(ದಾ), ಯರ್ತಿಗಾನಹಳ್ಳಿ, ಅಕ್ಲೇನಹಳ್ಳಿಮಲ್ಲೇನಹಳ್ಳಿ, ದೊಡ್ಡಸಣ್ಣೆ, ಭುವನಹಳ್ಳಿ, ಬೈಚಾಪುರ, ಚಿಕ್ಕಸಣ್ಣೆ, ಬಂಡರಾಮನಹಳ್ಳಿ (ದಾ), ಸಣ್ಣಅಮಾನಿಕೆರೆ(ಬೇ), ಉಪ್ಪಾರಹಳ್ಳಿ (ಬೇ), ಹೊಸತೋಟ(ಬೇ). |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಬೆಂಗಳೂರು ಗ್ರಾಮಾಂತರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| **13** | 13. ಬೆಟ್ಟಕೋಟೆ | ಬೆಟ್ಟಕೋಟೆ, ಬೆಟ್ಟಕೋಟೆಅಮಾನಿಕೆರೆ, ದೊಡ್ಡಹೊಸಹಳ್ಳಿ, ಚಿಕ್ಕಹೊಸಹಳ್ಳಿ (ದಾ), ರೆಡ್ಡಿಹಳ್ಳಿ, ಬಾಲದಿಮ್ಮನಹಳ್ಳಿ, ರಾಯಸಂದ್ರ, ಚನ್ನಹಳ್ಳಿ, ಹರಳೂರು, ಪೋಲನಹಳ್ಳಿ, ಎಸ್.ತೆಲ್ಲೋಹಳ್ಳಿ, ಚಿಕ್ಕರಾಮನಹಳ್ಳಿ (ಬೇ), ಟಿಅಗ್ರಹಾರ, ಬೂದಿಹಾಳ, ಅಗಲಕೋಟೆ, ಮಟ್ಟಬಾರ್ಲು, ತಮ್ಮೇನಹಳ್ಳಿ, ಬೊಮ್ಮನಹಳ್ಳಿ, ಗೋಕರೆಬಚ್ಚಹಳ್ಳಿ (ಬೇ). |
| **14** | 14. ನಲ್ಲೂರು | ನಲ್ಲೂರು, ನಲ್ಲೂರುಅಮರಾಯ (ದಾ), ಮಲ್ಲೇನಹಳ್ಳಿ, ಹೊಸನಲ್ಲೂರು, ಬಾಲೇಪುರ, ಮಲ್ಲೇಪುರ, ನಲ್ಲಪನಹಳ್ಳಿ, ಕಾಚೀಪುರ(ಬೇ), ಜೊನ್ನಹಳ್ಳಿ, ರಾಮನಹಳ್ಳಿ, ಬಿದಲಪುರ, ಬಿದಲಪುರಅಮಾನಿಕೆರೆ(ಬೇ), ಕಗ್ಗಲಹಳ್ಳಿ, ಕೊಂಡೇನಹಳ್ಳಿ, ಭಟ್ರಮಾರೇನಹಳ್ಳಿ, ಕವಡದಾಸನಹಳ್ಳಿ, ಸೋಮತ್ತನಹಳ್ಳಿ, ನಾಗೇನಹಳ್ಳಿ, ದೇವನಾಯಕನಹಳ್ಳಿ. |
| **15** | 15. ಬೂದಿಗೆರೆ | ಬೂದಿಗೆರೆ, ಬೂದಿಗೆರೆಅಮಾನಿಕೆರೆ (ಬೇ), ಕೊಟ್ಟತೆವರು, ಹಂದ್ರಹಳ್ಳಿ, ಹಿತ್ತರಹಳ್ಳಿ(ದಾ), ಗಂಗವಾರ, ಚೌಡಪ್ಪನಹಳ್ಳಿ. |

**ವಿಶೇಷ ಸೂಚನೆ:-**

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH